# ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ.

ಉಪಸ್ಥಿತರುಃ
ಶ್ರೀಮತಿ. ಸವಿತ ರುದ್ರಗೌಡ ಚಿಕ್ಕನಗೌಡರ್, ಬಿ.ಎ., ಎಲ್.ಎಲ್.ಬಿ.
ಎರಡನೇ ದರ್ಜೆ ನ್ಯಾಯಿಕ ದಂಡಾಧಿಕಾರಿ, ಕನಕಪುರ.

ಸಿ ಸಿ ನಂಃ **645/2020**

ಪಿರ್ಯಾದುದಾರರು: ಕರ್ನಾಟಕ ರಾಜ್ಯ,
ವಿಶೇಷ ಅಬಕಾರಿ ಪೋಲೀಸ್ ಠಾಣೆ.

– ವಿರುದ್ಧ –

ಆರೋಪಿ : ರಾಮನಾಯ್ಕ
ಬಿನ್ ಬಾಲನಾಯ್ಕ,
ವಯಸ್ಸು 35 ವರ್ಷಗಳು,
ವಾಸಃ ದೊಡ್ಡತಾಂಡ್ಯ ಗ್ರಾಮ,
ಕಸಬಾ ಹೋಬಳಿ, ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

:: ದೋಷಾರೋಪಣೆ ::

ನಾನು ಸವಿತ ರುದ್ರಗೌಡ ಚಿಕ್ಕನಗೌಡರ್, ಬಿ.ಎ., ಎಲ್.ಎಲ್.ಬಿ, ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಕನಕಪುರ, ಈ ಮೂಲಕ ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ ಃ-

ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕನಕಪುರ ತಾಲ್ಲೂಕು ಕಸಬಾ ಹೋಬಳಿ, ದೊಡ್ಡತಾಂಡ್ಯ ಗ್ರಾಮದಲ್ಲಿರುವ ಆರೋಪಿಯಾದ ನೀವು ನಿಮ್ಮ ಅಂಗಡಿಯ ಮುಂಭಾಗದಲ್ಲಿ ದಿನಾಂಕ 19.08.2019 ರಂದು ಬೆಳಿಗ್ಗೆ 08.00 ಗಂಟೆ ಸಮಯದಲ್ಲಿ ಅಕ್ರಮವಾಗಿ ಯಾವುದೇ ಪರವನಾಗಿ ಇಲ್ಲದೇ ರೂ.1353/- ಮೌಲ್ಯದ 90 ಎಂ.ಎಲ್ ನ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ 30

ಸಾಚೆಟ್ ಗಳು ಹಾಗೂ 180 ಎಂ.ಎಲ್ ನ ಓಲ್ಡ್ ಟವರೆನ್ ವಿಸ್ಕಿ ಯ 6 ಸಾಚೆಟ್ ಗಳನ್ನು ಮಾರಾಟ ಮಾಡುತ್ತಿದ್ದು, ಈ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ. 32, ಮತ್ತು 34 ರ ಅಡಿ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 29.08.2024 ರಂದು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್. ಸಿ. ಕನಕಪುರ.

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ ?

ಉತ್ತರ ಃ

2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ?

ಉತ್ತರ ಃ

ಮೇಲಿನ ಹೇಳಿಕೆಯನ್ನು ಆಪಾದಿತನಿಗೆ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸುತ್ತೇನೆ.

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್. ಸಿ. ಕನಕಪುರ.

ಆರೋಪಿತನ ಸಹಿ